Exemption from Stamp Duty on Interim and Short Term Loans.

Q.—2088. **Sri KUNDUR RUDRAPPA** (Channagiri).—

Will the Government be pleased to state :—

(*a*) whether it is a fact that they have issued orders not to collect Stamp Duty, Encumbrance Certificate fee and Registration fee from persons taking interim and short-term loans;

(*b*) whether the above fees were being collected from ryots previous to the above order;

(*c*) whether it is not a fact that they had ordered not to collect fees on such loans from ryots till the end of March 1958 ?

A.—**Sri M. P. PATIL** (Minister for Revenue).—

(*a*) Yes.
(*b*) Yes.
(*c*) Yes.

ಶ್ರೀ ಕುಂದೂರು ರುದ್ರಪ್ಪ.—ಕೋ-ಆಪರೇಟೀವ್ ಸೊಸೈಟಿಗಳನ್ನು ತೆರೆದಿರುವುದು ರೈತರ ಉಪಯೋಗ ಕ್ಕಾಗಿಯೇ ಅಲ್ಲವೇ ?

ಅಧ್ಯಕ್ಷರು.—ಇದು ಸರಿಯಾದ ಉಪಪ್ರಶ್ನೆಯಾಗುವು ದಿಲ್ಲ. ಮತ್ತೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಕುಂದೂರು ರುದ್ರಪ್ಪ.—ಸ್ಟ್ಯಾಂಪ್ ಡ್ಯೂಟೀ, ರಿಜಿಸ್ಟ್ರೇಷನ್ ಚಾರ್ಜುಗಳನ್ನು ವಸೂಲು ಮಾಡುವು ದಿಲ್ಲವೆಂದು ಹೇಳಿದ್ದೀರಿ. ಯಾವ ತಾರೀಖಿನಿಂದ ಈ ಆದೇಶವನ್ನು ಜಾರಿಮಾಡಿದ್ದೀರಿ ?

*ಶ್ರೀ ಎಂ. ಪಿ. ಪಾಟೀಲ್.—27-6-1957 ರಲ್ಲೆ ಆರ್ಡರು ಮಾಡಿ ಈ ರೀತಿ ಏನಾದರೂ ಹಣವನ್ನು ವಸೂಲುಮಾಡಿದ್ದರೆ ಅದನ್ನು ರೀಫಂಡು ಮಾಡ ಬಹುದೆಂದು ಹೇಳಲಾಗಿದೆ.

ಶ್ರೀ ಕುಂದೂರು ರುದ್ರಪ್ಪ.—ಈ ಆದೇಶವು 1958ನೆಯ ಮಾರ್ಚಿ ತಿಂಗಳಿಗೆ ಆಸ್ಪೈರಾಗುವುದ ರಿಂದ ಇನ್ನು ಮುಂದೆ ಯಾವ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಮಾಡಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ಈ ಅವಧಿಯನ್ನು ಪುನಃ 1959ನೆಯ ಮಾರ್ಚಿ ತಿಂಗಳವರೆಗೆ ಹೆಚ್ಚಿಸ ಲಾಗಿದೆ.

ಶ್ರೀ ಕುಂದೂರು ರುದ್ರಪ್ಪ.—ಹೀಗೆ ಒಂದೊಂದು ವರ್ಷ ಅವಧಿಯನ್ನು ಹೆಚ್ಚಿಸುವುದರ ಬದಲು ಪಂಚ ವಾರ್ಷಿಕ ಯೋಜನೆಯಂತೆ ಐದು ವರ್ಷಗಳಕಾಲ ಒಮ್ಮೆಗೆ ಹೆಚ್ಚಿಸುವುದಕ್ಕೆ ಏನು ಕಷ್ಟವಾಗುತ್ತದೆ ?

ಶ್ರೀ ಎಂ. ಪಿ. ಪಾಟೀಲ್.—ಅದು ತಮ್ಮ ಸೂಚನೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಮಧ್ಯೇ ಈ ಆರ್ಡರು ಬಾರದೆ ನಾಲ್ಕಾರು ತಿಂಗಳಲ್ಲಿ ವಸೂಲು ಮಾಡಿರುವುದನ್ನೂ ಕೂಡ ವಾಪಸ್ಸು ಮಾಡ ಲಾಗುವುದೇ ?

ಶ್ರೀ ಎಂ. ಪಿ. ಪಾಟೀಲ್.—ವಾಪಸ್ಸು ಕೊಡಲು ಆರ್ಡರಾಗಿದೆ.

ಶ್ರೀ ಸಿ. ಎಸ್. ಹುಲಕೋಟಿ.—ಈ ರೀಫಂಡಿಗಾಗಿ ಎಷ್ಟೋ ಅರ್ಜಿಗಳು ಬಂದಿದ್ದರೂ ಅವಿನ್ನೂ ಸರ ಕಾರದ ಲಕ್ಷ್ಯಕ್ಕೆ ಬಂದಿಲ್ಲ ಎನ್ನುವುದು ಸರಿಯೇ ?

ಶ್ರೀ ಎಂ. ಪಿ. ಪಾಟೀಲ್.—ಇದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಶಿವಪ್ಪ.—ಕಾನೂನು ಪ್ರಕಾರವಾಗಿ ರೀಫಂಡು ಮಾಡಲಿಕ್ಕೆ ಅವಕಾಶವಾಗುವಂತೆ ಏರ್ಪಾಡುಮಾಡಲು ಆಗುವುದಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಅದನ್ನು ಮಾಡಬಹುದು.

Sri G. SIVAPPA.—Instead of passing the Government order every year and delaying it by 15 or 20 days thereby causing much inconvenience to the ryots, why not Government pass an order for a certain period, say, two or three years ?

Sri M. P. PATIL.—It is a suggestion for action. It was only last year that there was delay. Three orders were issued and there was some delay in respect of one order. This year the order has been issued in time.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ರೀಫಂಡಿಗಾಗಿ ಅರ್ಜಿಗಳನ್ನು ಜನರೇ ಹಾಕಬೇಕೋ ಇಲ್ಲ ಸರಕಾರ ದವರೇ ಇಂತಿಂತಹ ಪೀರಿಯಡ್ಡಿನೊಳಗಾಗಿ ರೀಫಂಡು ಮಾಡುತ್ತೇವೆಂದು ಹೇಳುತ್ತಾರೆಯೇ ?

ಶ್ರೀ ಎಂ. ಪಿ. ಪಾಟೀಲ್—ರೀಫಂಡು ಯಾರಿಗೆ ಬೇಕಾಗಿದೆಯೋ ಅವರು ಅರ್ಜಿ ಹಾಕಿಕೊಂಡರೆ ಅವರಿಗೆ ಹಣ ವಾಪಸ್ಸು ದೊರೆಯುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಹೀಗೆ ವರ್ಷೇ ವರ್ಷೇ ರಿನ್ಯೂಯಲ್ಲೆಂದು ಆರ್ಡರು ಮಾಡುತ್ತ ಹೋದರೆ ರೈತರಿಗೆ ಅನ್ಯಾಯವಾಗುತ್ತದೆ ಎನ್ನುವುದು ಸರಕಾರಕ್ಕೆ ಗೊತ್ತಿದೆಯೇ ?

ಅಧ್ಯಕ್ಷರು.—ಇದಕ್ಕೆ ಮಾನ್ಯ ಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಎಂ. ಪಿ. ಪಾಟೀಲ್.—ಸ್ವಾಮೀ, ಇದರಲ್ಲಿ ಏನಾಗಿದೆ ಎಂದರೆ, ರೀ ಆರ್ಗನೈಸೇಷನ್ನು ಆಧದ್ದು 1957ರಲ್ಲಿ. ಅದರಿಂದ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ರೀತಿಯಾದ ಕಾನೂನುಗಳಾಗಿದ್ದುವು. ಅವನ್ನೆಲ್ಲ ಸರಿಯಾಗಿ ಪರಿಶೀಲಿಸಿ ಈ ರೀತಿಯಾದ ಆರ್ಡರನ್ನು ಹೊರಡಿಸಲು ಹೋದ ಸಾರಿ ಎಂಟು ಹತ್ತು ದಿನಗಳು ತಡವಾಯಿತು. ಈ ಸಾರಿ ತಾತ್ಕಾಲಿಕವಾಗಿ ಹೊರಡಿ ಸಿರುವುದರಿಂದ ರೈತರಿಗೇನೂ ತೊಂದರೆಯಾಗಿಲ್ಲ.

Tarring of the Road from Maralli to Mamballi.

Q.—2435. **Smt. KEMPAMMA** (Kollegal).—

Will the Government be pleased to state :—

(*a*) whether they propose to get the road from Maralli to Mamballi tarred ;